# ದಾಸೋಹ ತತ್ವ ಮತ್ತು ಉಚಿತ ಪ್ರಸಾದ ನಿಲಯಗಳು

**ಎಫ್.ಎನ್. ಹುಡೇದ***

**DOI: https://doi.org/10.5281/zenodo.21438225**

**ABSTRACT**

ಭಾರತೀಯ ಸಂಸ್ಕೃತಿಯಲ್ಲಿ 12ನೇ ಶತಮಾನದ ಶರಣರು ಪ್ರತಿಪಾದಿಸಿದ 'ದಾಸೋಹ ತತ್ವ'ವು ಅತ್ಯಂತ ಶ್ರೇಷ್ಠ ಮಾನವೀಯ ಮೌಲ್ಯವಾಗಿದೆ. ಕೇವಲ ವೈಯಕ್ತಿಕ ಮುಕ್ತಿಯನ್ನು ಗುರಿಯಾಗಿಸದೆ, ಸಮಾಜದ ಕಲ್ಯಾಣವನ್ನು ಸಾಧಿಸುವ ಈ ತತ್ವವು, ಸಂಪತ್ತಿನ ಸಮಾನ ಹಂಚಿಕೆ ಮತ್ತು ನಿಸ್ವಾರ್ಥ ಸೇವೆಯನ್ನು ಪ್ರತಿಪಾದಿಸುತ್ತದೆ. ಶರಣರ ಈ ಆಶಯವನ್ನು ಸಾಕಾರಗೊಳಿಸುವಲ್ಲಿ ಕರ್ನಾಟಕದ ವೀರಶೈವ–ಲಿಂಗಾಯತ ಮಠಗಳು, ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದ ಹಾಲಕೆರೆ ಶ್ರೀ ಅನ್ನದಾನೇಶ್ವರ ಮಠವು ಪ್ರಮುಖ ಪಾತ್ರ ವಹಿಸಿದೆ. ಜಾತಿ, ಧರ್ಮ, ವರ್ಗಗಳ ಭೇದವಿಲ್ಲದೆ ಲಕ್ಷಾಂತರ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನ್ನ ಮತ್ತು ಅಕ್ಷರ ದಾಸೋಹವನ್ನು ನೀಡುವ ಮೂಲಕ ಉಚಿತ ಪ್ರಸಾದ ನಿಲಯಗಳು ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಕ್ರಾಂತಿಯನ್ನು ಮಾಡಿವೆ. ವಿದ್ಯಾರ್ಥಿಗಳಲ್ಲಿ ಸಮಾನತೆ, ಸಹಕಾರ ಮತ್ತು ಮೌಲ್ಯಾಧಾರಿತ ಬದುಕನ್ನು ರೂಪಿಸುವ ಈ ಪ್ರಸಾದ ನಿಲಯಗಳು ಕೇವಲ ಹಸಿವು ನೀಗಿಸುವ ಕೇಂದ್ರಗಳಾಗಿರದೆ, ಮಾನವ ಸಂಪನ್ಮೂಲ ಅಭಿವೃದ್ಧಿಯ ಕೇಂದ್ರಗಳಾಗಿ ರೂಪುಗೊಂಡಿರುವ ಬಗೆಯನ್ನು ಈ ಲೇಖನವು ವಿಶ್ಲೇಷಿಸುತ್ತದೆ.

**KEYWORDS:** ದಾಸೋಹ ತತ್ವ, ಶರಣ ಸಂಸ್ಕೃತಿ, ಉಚಿತ ಪ್ರಸಾದ ನಿಲಯ, ಅನ್ನದಾನೇಶ್ವರ ಮಠ, ಸಾಮಾಜಿಕ ಸಮಾನತೆ.

* **ಎಫ್.ಎನ್. ಹುಡೇದ,** ಸಂಶೋಧನಾರ್ಥಿ, ಡಾ. ಎಂ.ಎಂ. ಕಲಬುರ್ಗಿ ಸಂಶೋಧನಾ ಅಧ್ಯಯನ ಕೇಂದ್ರ, ಗದಗ.

ಭಾರತೀಯ ಸಂಸ್ಕೃತಿಯಲ್ಲಿ ಮಾನವೀಯ ಮೌಲ್ಯಗಳು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿವೆ. ಇವುಗಳಲ್ಲಿ 'ದಾಸೋಹ ತತ್ವ' ಒಂದು ಮಹತ್ವದ ತತ್ವವಾಗಿದೆ. 'ದಾಸೋಹ' ಎಂಬ ಪದವು ಕನ್ನಡದ 'ದಾಸ' (ಸೇವಕ) ಮತ್ತು 'ಓಹ' (ಅರ್ಪಣೆ) ಎಂಬ ಪದಗಳಿಂದ ರೂಪುಗೊಂಡಿದೆ. ಅಂದರೆ, ದಾಸೋಹ ಎಂದರೆ ನಿಸ್ವಾರ್ಥ ಸೇವೆ ಮತ್ತು ಹಂಚಿಕೊಳ್ಳುವಿಕೆ ಎಂಬ ಅರ್ಥವನ್ನು ನೀಡುತ್ತದೆ.

ದಾಸೋಹ ತತ್ವವು ಮುಖ್ಯವಾಗಿ 12ನೇ ಶತಮಾನದ ಶರಣರ ಉಪದೇಶಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಈ ತತ್ವವು ಸಮಾಜದಲ್ಲಿ ಸಮಾನತೆ, ಸಹಕಾರ ಮತ್ತು ಪರಸ್ಪರ ಸಹಾಯದ ಮೌಲ್ಯವನ್ನು ಉತ್ತೇಜಿಸುತ್ತದೆ. ದಾಸೋಹ ತತ್ವವು ಮೂಲತಃ 'ನಾನು ಗಳಿಸಿದುದು ನನ್ನದೇ ಅಲ್ಲ ಅದು ಸಮಾಜದ ಸಂಪತ್ತು' ಎಂಬ ಆಲೋಚನೆಗೆ ಆಧಾರವಾಗಿದೆ. ನಿಸ್ವಾರ್ಥ ಸೇವೆ, ಹಂಚಿಕೊಳ್ಳುವಿಕೆ, ಸಮಾನತೆ, ಪರೋಪಕಾರ ಇವು ದಾಸೋಹದ ಮುಖ್ಯ ಅಂಶಗಳಾಗಿವೆ. ಈ ತತ್ವದ ಪ್ರಕಾರ ವ್ಯಕ್ತಿಯು ತನ್ನ ಆದಾಯ ಅಥವಾ ಸಂಪತ್ತನ್ನು ತನ್ನ ಅಗತ್ಯಕ್ಕಿಂತ ಹೆಚ್ಚಾದಷ್ಟು ಸಮಾಜದ ಹಿತಕ್ಕಾಗಿ ಬಳಸಬೇಕು.

ಆಸೆಯೆಂಬುದು ಅರಸಿಗಲ್ಲದೆ, ಶಿವಭಕ್ತರಿಗುಂಟೆ? ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯ? ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ ದೂರ ಮಾರಯ್ಯ. ಆಯ್ದಕ್ಕಿ ಲಕ್ಕಮ್ಮನು ಈ ವಚನದಲ್ಲಿ ಸಂಗ್ರಹ ನಿಷೇಧ ಧೋರಣೆಯನ್ನು ಪ್ರತಿಪಾದಿಸುತ್ತಾಳೆ. ವಸ್ತುಮೋಹ ಎಂಬುದು ಬಲಾಢ್ಯರ, ಧನಾಢ್ಯರ ಮತ್ತು ಸಾಮ್ರಾಜ್ಯಶಾಹಿಗಳ ಮನದಾಳದಲ್ಲಿರುತ್ತದೆ, ಸಂಪತ್ತು ಹೆಚ್ಚಿದಷ್ಟೂ, ಸಾಮ್ರಾಜ್ಯ ವಿಸ್ತರಣೆಯಾದಷ್ಟೂ ಅವರ ದಾಹ ಹೆಚ್ಚಾಗುತ್ತಲೇ ಹೋಗುತ್ತದೆ. ಅವರು ಪರರನ್ನು ಶೋಷಿಸುವ ಮೂಲಕ ಸಂಪತ್ತಿನ ವಿಸ್ತರಣೆ ಮಾಡುತ್ತ ಹೋಗುತ್ತಾರೆ. ಆದರೆ ಶಿವಭಕ್ತರು ತಮ್ಮ ಸ್ವಕಾಯಕದ ಮೇಲೆ ಅವಲಂಬಿತರಾಗಿರುತ್ತಾರೆ. ಗಳಿಸಿದ್ದರಲ್ಲಿ ತಮಗೆ ಬೇಕಾದಷ್ಟು ಮಾತ್ರ ಪ್ರಸಾದವೆಂದು ಸ್ವೀಕರಿಸಿ ಉಳಿದೆಲ್ಲವನ್ನೂ ದಾಸೋಹ ರೂಪದಲ್ಲಿ ಶರಣಸಂಕುಲಕ್ಕೆ ಅರ್ಪಿಸುತ್ತಾರೆ. ಹೀಗೆ ಮಾಡುವುದರಿಂದ ಯಾರೊಬ್ಬರ ಬಳಿಯೂ ಸಂಪತ್ತಿನ ಸಂಗ್ರಹವಾಗುವುದಿಲ್ಲ. 'ಆಸೆ ಬೇಡ, ಬದುಕುವ ಧೈರ್ಯ ಬೇಕು, ಸಂಗ್ರಹಬುದ್ಧಿ ಬೇಡ, ಕಾಯಕ-ದಾಸೋಹ ಬೇಕು, ಹಿಂಜರಿಕೆ ಬೇಡ, ಚಿತ್ತಶುದ್ಧಿ ಬೇಕು,' ಇವು ಕಡುಬಡವಿ ಲಕ್ಕಮ್ಮನ ಮಹೋನ್ನತ ಜೀವನ ಸಂದೇಶಗಳಾಗಿವೆ.[1]

ದಾಸೋಹ ತತ್ವವನ್ನು ಪ್ರಚಾರ ಮಾಡಿದ ಸಮಾಜ ಸುಧಾರಕರಲ್ಲಿ ಬಸವಣ್ಣನವರು ಪ್ರಮುಖರು. 12ನೇ ಶತಮಾನದಲ್ಲಿ ಸಮಾಜದಲ್ಲಿನ ಜಾತಿ ವ್ಯವಸ್ಥೆ, ಅಸಮಾನತೆ ಮತ್ತು ಶೋಷಣೆಯನ್ನು ವಿರೋಧಿಸಿದರು. ಕಾಯಕವೇ ಕೈಲಾಸ, ದಾಸೋಹವೇ ಧರ್ಮ ಎಂದು ಹೇಳುತ್ತಾ "ತಿನ್ನುವವನು ಒಬ್ಬನೇ ಇರಬಾರದು, ಎಲ್ಲರಿಗೂ ಸಿಗಬೇಕು" ಅವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಎಲ್ಲ ವರ್ಗದ ಜನರು ಸೇರಿ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು. ದಾಸೋಹ ತತ್ವವು ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯವನ್ನು ಸಾಧಿಸಲು ಸಹಾಯ ಮಾಡುತ್ತದೆ. ಸಂಪತ್ತು ಸಮಾನವಾಗಿ ಹಂಚಲ್ಪಟ್ಟು ಬಡತನ ಕಡಿಮೆಯಾಗುತ್ತದೆ, ಆರ್ಥಿಕ ಅಸಮಾನತೆ ತಗ್ಗುತ್ತದೆ. ಅನ್ಯರಲ್ಲಿ ಪರಸ್ಪರ ಪ್ರೀತಿ ಮತ್ತು ಸಹಕಾರ ಬೆಳೆಯುತ್ತದೆ. ಜಾತಿ, ವರ್ಗಭೇದ ಕಡಿಮೆಯಾಗುತ್ತದೆ. ದಯೆ, ಸಹಾನುಭೂತಿ, ಸೇವಾಭಾವದೊಂದಿಗೆ ಮಾನವೀಯ ಮೌಲ್ಯಗಳ ಬೆಳವಣಿಗೆಯಾಗುತ್ತದೆ. ಸಂಪತ್ತಿನ ಸಮಾನ ಹಂಚಿಕೆ, ಶ್ರಮದ ಗೌರವ, ಅನವಶ್ಯಕ ಸಂಗ್ರಹಕ್ಕೆ ವಿರೋಧ ಇವು ಸಾಮಾಜಿಕ ಆರ್ಥಿಕ ನ್ಯಾಯವನ್ನು ಉತ್ತೇಜಿಸುತ್ತದೆ. ದಾಸೋಹವು ಇಂದಿನ ಕಾಲದಲ್ಲಿ 'ಸಾಮಾಜಿಕ

ಕಲ್ಯಾಣ' ಮತ್ತು 'ಸಮಗ್ರ ಅಭಿವೃದ್ಧಿ'ಯೊಂದಿಗೆ ಹೊಂದಾಣಿಕೆ ಹೊಂದಿದೆ. ಸೇವೆಯೇ ದೇವರ ಪೂಜೆ, ದಾನ ಧರ್ಮ, ಅಹಂಕಾರ ನಿರ್ಮೂಲನೆ, ಇತರರಿಗೆ ಕೊಡುವುದು ನಿಜವಾದ ಭಕ್ತಿ ಈ ಅಂಶಗಳು ದಾಸೋಹದ ಧಾರ್ಮಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ.

ಶರಣರು ಷಟ್ಸ್ಥಲ, ಪಂಚಾಚಾರ, ಅಷ್ಟಾವರಣಗಳನ್ನು ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಧಾರ್ಮಿಕ ಕ್ರಿಯೆಗಳನ್ನು ಪ್ರತಿಪಾದಿಸಿದರೆ, ಕಾಯಕ, ದಾಸೋಹಗಳನ್ನು ಸಮಾಜಕೇಂದ್ರಿತ ನೆಲೆಯಲ್ಲಿ ಪ್ರತಿಪಾದಿಸುತ್ತಾರೆ. ಮೊದಲನೆಯದು ಆತ್ಮಕಲ್ಯಾಣ ಸಿದ್ಧಾಂತವಾದರೆ, ಎರಡನೆಯದು ಸಮಾಜಕಲ್ಯಾಣ ಸಿದ್ಧಾಂತವಾಗಿದೆ. ಒಂದು ಆಚಾರ ಪ್ರಧಾನವಾದರೆ, ಇನ್ನೊಂದು ವಿಚಾರ ಪ್ರಧಾನವಾಗಿದೆ. ಬಸವಣ್ಣನವರು ತಮ್ಮ ವಚನದಲ್ಲಿ "ನಡೆಯಲ್ಲಿ ಎಚ್ಚೆತ್ತು, ನುಡಿಯಲ್ಲಿ ತಪ್ಪಿದರೆ ಹಿಡಿದಿದ್ದ ಲಿಂಗ ಘಟಸರ್ಪವಾಗಿ ಕಚ್ಚುವುದು ಕೂಡಲಸಂಗಮದೇವ" ಎಂದಿದ್ದಾರೆ.

ಶರಣರ ಕಾಯಕತತ್ವಕ್ಕೆ ಪ್ರಾಮುಖ್ಯತೆ ಬಂದಂತೆ, ಅವರ ದಾಸೋಹ ತತ್ವಕ್ಕೂ ಮಹತ್ವ ಬಂತು. ಕಾಯಕ ಮತ್ತು ದಾಸೋಹಗಳು ಒಂದೇ ನಾಣ್ಯದ ಎರಡು ಮುಖಗಳೆಂದು ಪ್ರತಿಪಾದಿಸಿದರು. ಅಂದು ಶರಣರು ನಡೆಸುತ್ತಿದ್ದ ದಾಸೋಹ ಪರಿಕಲ್ಪನೆ ಕಲ್ಯಾಣದ ಸುತ್ತೆಲ್ಲ ಪಸರಿಸಿತು. ಅನ್ನದಾಸೋಹವು ಅನೇಕ ಬಡವರು, ನಿರ್ಗತಿಕರು, ಅಸಹಾಯಕರು, ದುರ್ಬಲರು ಸ್ವಾಭಿಮಾನದಿಂದ ಬದುಕು ನಡೆಸುವಂತಾಯಿತು. ಸಹಪಂಕ್ತಿಭೋಜನದಿಂದ ಎಲ್ಲರೂ ಒಂದು ಕಡೆ ಕುಳಿತು ಪ್ರಸಾದ ಸೇವಿಸುತ್ತಿರಲು ಜಾತಿಯ ಅಹಂಭಾವ ಕಳೆದು ಸಮಾನತೆ ಭಾವನೆ ಮೂಡಿತು.

"ದಾಸೋಹವೆಂಬುದು ಅಂತರಂಗದ ಭಕ್ತಿಸಾಧ್ಯತೆ, ಅದು ತನು-ಮನ-ಧನದ ಸಮರ್ಪಣೆ. ತನ್ನನ್ನು ತಾನು ಸಮುದಾಯಕ್ಕೆ ಸಮಾಜಕ್ಕೆ ಅರ್ಪಿಸಿಕೊಳ್ಳುವುದೇ ನಿಜವಾದ ದಾಸೋಹವೆಂದು ಶರಣರು ಹೇಳಿದ್ದಾರೆ" ಎಂದು ಲೇಖಕ ಬಸವರಾಜ ಸಬರದ ವಿಶ್ಲೇಷಿಸಿದ್ದಾರೆ.

ಕಾಯಕದ ಪರಿಕಲ್ಪನೆಯು ಸಾರ್ಥಕತೆ ಪಡೆಯುವುದು ದಾಸೋಹದಲ್ಲಿ. ಅಂದರೆ ದಾಸೋಹದಲ್ಲಿ ಪರ್ಯವಸಾನಗೊಳ್ಳದ ಕಾಯಕವು ಕಾಯಕವಲ್ಲ. ಈ ದಾಸೋಹ ತ್ರಿವಿಧ ನೆಲೆಗಳಲ್ಲಿ ಆಚರಣೆಗೆ ಬರಬೇಕು. ಹೀಗಾಗಿ ಗುರುವಿಗೆ ತನು ದಾಸೋಹ, ಲಿಂಗಕ್ಕೆ ಮನದಾಸೋಹ, ಜಂಗಮಕ್ಕೆ ಧನ ದಾಸೋಹ ಜರುಗಬೇಕೆಂಬ 'ತ್ರಿವಿಧ ದಾಸೋಹ' ನುಡಿಗಟ್ಟು ಶರಣಧರ್ಮದಲ್ಲಿ ತುಂಬ ಮಹತ್ವ ಪಡೆದಿದೆ. ಅರಿವು, ಆಚಾರ, ಅನುಭಾವ ನೆಲೆಗಳಲ್ಲಿ ಕ್ರಮವಾಗಿ ತನು, ಮನ, ಧನ ಮಾಧ್ಯಮಗಳಿಂದ ಈ ಕ್ರಿಯೆ ಜರುಗಬೇಕು. ಇಲ್ಲಿ ಗುರುವಿಗೆ ತನುದಾಸೋಹ, ಲಿಂಗಕ್ಕೆ ಮನದಾಸೋಹ-ಇವು 'ವ್ಯಕ್ತಿಕೇಂದ್ರಿತ ದಾಸೋಹ' ವೆನಿಸಿದರೆ, ಜಂಗಮಕ್ಕೆ ಧನದಾಸೋಹವು 'ಸಮಾಜಕೇಂದ್ರಿತ ದಾಸೋಹ' ವೆನಿಸುತ್ತದೆ. ಇಂದು 'ದಾಸೋಹ' ಎಂದಾಕ್ಷಣ ಜಂಗಮದಾಸೋಹವೇ ಎದ್ದು ಕಾಣಲು, ಅದರ ಸಾಮಾಜಿಕ ವ್ಯಾಪಕತೆ, ಸಾರ್ಥಕತೆಗಳೇ ಕಾರಣಗಳಾಗಿವೆ.

ಶರಣಧರ್ಮ ಕೇವಲ ಆತ್ಮೋದ್ಧಾರ ನಿಷ್ಠವಾದುದಲ್ಲ. ಆತ್ಮೋದ್ಧಾರ ಮೊದಲ ಹಂತ, ಸಮಾಜೋದ್ಧಾರ ಆಮೇಲಿನ ಹಂತ. ಹೀಗೆ ಗಳಿಸಿಕೊಂಡ ಆತ್ಮಶುದ್ಧಿಯನ್ನು ಸಮಾಜಶುದ್ಧಿ, ಸಮಾಜಸಮೃದ್ಧಿಗಾಗಿ ವಿನಿಯೋಗಿಸಿದಲ್ಲಿ ಅದರ ಸಾರ್ಥಕತೆಯಿದೆ. ತನ್ನಲ್ಲಿ ದೇವರನ್ನು ಕಾಣುವ ವ್ಯಕ್ತಿಕೇಂದ್ರಿತವು ಈಗ ಸಾಮಾಜಿಕರಲ್ಲಿ ದೇವರನ್ನು ಕಾಣುವ

ಸಮಾಜಕೇಂದ್ರಿತವಾಗುತ್ತದೆ. ಇದರಿಂದ ತಾನು ಸಮಾಜದ ಅವಿಭಾಜ್ಯ ಅಂಗವೆಂಬ ಪ್ರಜ್ಞೆ ಗಟ್ಟಿಗೊಂಡು, ಅದರ ಕಲ್ಯಾಣವೇ ತನ್ನ ಕಲ್ಯಾಣವೆಂಬ ಭಾವ ಬೆಳೆದು ನಿಲ್ಲುತ್ತದೆ. ಹೀಗೆ ಆತ್ಮೋದ್ಧಾರದ 'ಸೋಹಂ' ಪ್ರಜ್ಞೆ, ಸಮಾಜೋದ್ಧಾರದ 'ದಾಸೋಹಂ' ಪ್ರಜ್ಞೆಯಾಗಿ ಬೆಳೆಯಬೇಕು. ಆದುದರಿಂದ ಬಸವಣ್ಣನವರು "ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ" ಎಂದು, ಅಲ್ಲಮಪ್ರಭು "ಸೋಹಂ ಎಂಬುದಕ್ಕೆ ದಾಸೋಹವ ಮಾಡದಿರ್ದಡೆ ಅತಿಗಳೆವೆ ನೋಡಾ, ಗುಹೇಶ್ವರಾ" ಹೇಳುತ್ತಾರೆ. ಹೀಗೆ "ಸೋಹಂ"ಕ್ಕೆ ಸೀಮಿತವಾಗಿದ್ದ ಭಾರತೀಯ ತತ್ವಜ್ಞಾನವನ್ನು "ದಾಸೋಹಂ" ವರೆಗೆ ವಿಸ್ತರಿಸಿದ ಕೀರ್ತಿ ಶರಣರಿಗೆ ಸಲ್ಲುತ್ತದೆ.[2]

ದಾಸೋಹವೆಂದರೆ, ಕೇವಲ ಅನ್ನದಾಸೋಹ ಮಾತ್ರವಲ್ಲ, ದಾಸೋಹದಲ್ಲಿ ಅನೇಕ ಪ್ರಕಾರಗಳಿವೆ. ಬಸವಣ್ಣನವರು ತಮ್ಮ ವಚನಗಳಲ್ಲಿ ವಿವಿಧ ದಾಸೋಹಗಳ ಪರಿಚಯ ನೀಡಿದ್ದಾರೆ. ಭಕ್ತಶ್ರೇಷ್ಠನಾದವನು ಭಕ್ತಿದಾಸೋಹ ಮಾಡಬಹುದು, ಯುಕ್ತನಾದವನು ಯುಕ್ತಿ ದಾಸೋಹವ ಮಾಡಬಹುದು, ಐಕ್ಯಸ್ಥಲವ ಸಾಧಿಸಿದವನು ಮಮಕಾರ ದಾಸೋಹವ ಮಾಡಬಹುದು. ಎಲ್ಲ ವಿಷಯದಲ್ಲಿಯೂ ದಾಸೋಹವಿದೆಯೆಂದು ಬಸವಣ್ಣನವರು ಉದಾಹರಣೆಯೊಂದಿಗೆ ವಿವರಿಸಿದ್ದಾರೆ.

ಶ್ರೀ ಅನ್ನದಾನೇಶ್ವರ ಸಂಸ್ಥಾನ ಮಠವು 12ನೇ ಶತಮಾನದ ಶರಣ ಪರಂಪರೆಯ ಮಠವಾಗಿದೆ. ಶ್ರೀಮಠದ ಪರಂಪರೆಯ ಎಲ್ಲ ಗುರುಗಳು ಅನ್ನದಾನಕ್ಕೆ ಹೆಚ್ಚು ಮಹತ್ವ ನೀಡಿದ್ದಾರೆ. ಈ ಕಾರಣದಿಂದ 'ಅನ್ನದಾನೇಶ್ವರ' ಎಂಬ ಹೆಸರು ಪರಂಪರಾಗತವಾಗಿ ಬಂದಿದೆ. 'ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ' ಎಂಬ ಬಸವಣ್ಣನವರ ವಚನದ ಸಾಲು ಶ್ರೀಮಠದ ಧ್ಯೇಯ ವಾಕ್ಯವಾಗಿದೆ. ಇದರಿಂದ ಶ್ರೀಮಠದ ಜೀವಾಳವೇ ದಾಸೋಹವಾಗಿದೆ. ಅನ್ನದೇವರ ಮುಂದೆ ಇನ್ನೂ ದೇವರುಂಟೇ ಅನ್ನವೇ ದೇವ ಸರ್ವಜ್ಞ ಎಂಬ ಮಾತು ಶ್ರೀಮಠದಲ್ಲಿ ಸಾಕಾರಗೊಂಡಿದೆ. 'ಅನ್ನದಾನವೇ ಪರಮ ಧರ್ಮ' ಎಂಬ ಸಂದೇಶವನ್ನು ಸಮಾಜಕ್ಕೆ ನೀಡಿದರು. ಬಸವಣ್ಣನವರ ಕಾಯಕವೇ ಕೈಲಾಸ ಮತ್ತು ದಾಸೋಹ ತತ್ವಗಳನ್ನೇ ಆಧಾರವಾಗಿ ತೆಗೆದುಕೊಂಡಿದೆ. ಆರಂಭದಿಂದಲೂ ಯಾತ್ರಿಕರಿಗೆ ಉಚಿತ ಅನ್ನ ಮತ್ತು ಆಶ್ರಯ ನೀಡುವ ಪದ್ಧತಿ ಇಲ್ಲಿದೆ. ಮಠದಲ್ಲಿ ನಡೆಯುವ ದಾಸೋಹವು ಅತ್ಯಂತ ಸಂಘಟಿತವಾಗಿದೆ. ಪ್ರತಿದಿನ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಅನ್ನದಾನ ನಿರಂತರವಾಗಿದೆ. ಭಕ್ತರು ಮತ್ತು ದಾನಿಗಳಿಂದ ಧಾನ್ಯ, ತರಕಾರಿ, ಹಣದ ಸಹಾಯ, ಶ್ರೀಮಠದ ಜಮೀನಿನ ಉತ್ಪನ್ನಗಳನ್ನು ದಾಸೋಹಕ್ಕೆ ಬಳಸುತ್ತಾರೆ. ಶ್ರೀಮಠದ 27 ಶಾಖಾಮಠಗಳಲ್ಲಿ ನಿರಂತರ ಅನ್ನದಾಸೋಹ ನಡೆಯುತ್ತದೆ. ಶ್ರೀಮಠದ ಪ್ರತಿಯೊಂದು ಜಾತ್ರೆ, ಉತ್ಸವಗಳಲ್ಲಿ ಲಕ್ಷಾಂತರ ಭಕ್ತರು ಪ್ರಸಾದ ಸ್ವೀಕರಿಸುತ್ತಾರೆ. ಹಾಲಕೆರೆಯಲ್ಲಿ ಏಕಕಾಲಕ್ಕೆ ಜಾತಿ–ಮತ–ಪಂಥವಿಲ್ಲದೇ 1000 ಭಕ್ತರು ಸಹಪಂಕ್ತಿಭೋಜನ ಮಾಡುವ ಪ್ರಸಾದ ನಿಲಯವಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಗ್ರಾಮೀಣ ಭಾಗದ ದಾಸೋಹದ ಪ್ರಮುಖ ಮಠವಾಗಿದೆ.

ದಾಸೋಹ ತತ್ವವು ಮಾನವ ಜೀವನದ ಒಂದು ಶ್ರೇಷ್ಠ ಮೌಲ್ಯವಾಗಿದೆ. ಇದು ಕೇವಲ ಧಾರ್ಮಿಕ ಅಥವಾ ತತ್ವಶಾಸ್ತ್ರೀಯ ಕಲ್ಪನೆ ಅಲ್ಲ, ಆದರೆ ಸಮಾಜದ ಸಮಗ್ರ ಅಭಿವೃದ್ಧಿಗೆ ಮಾರ್ಗದರ್ಶಕವಾಗಿದೆ.

**ಉಚಿತ ಪ್ರಸಾದ ನಿಲಯಗಳು**

ಭಾರತೀಯ ಸಂಸ್ಕೃತಿಯಲ್ಲಿ ಅನ್ನದಾನವು ಮಹತ್ವದ ದಾನವೆಂದು ಪರಿಗಣಿಸಲಾಗಿದೆ. ಈ ಪರಂಪರೆಯ ಭಾಗವಾಗಿ ಉಚಿತ ಪ್ರಸಾದ ನಿಲಯಗಳು ಅನೇಕ ಶತಮಾನಗಳಿಂದ

ಸಮಾಜದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವು ಕೇವಲ ಹಸಿವು ತಣಿಸುವ ಕೇಂದ್ರಗಳಲ್ಲ, ಶಿಕ್ಷಣದ ಅಭಿವೃದ್ಧಿಗೆ ಸಹಕಾರಿಯಾಗುವ ಮಹತ್ವದ ಸಾಮಾಜಿಕ ಸಂಸ್ಥೆಗಳಾಗಿವೆ. ಉಚಿತ ಪ್ರಸಾದ ನಿಲಯಗಳು (ಅನ್ನದಾನ ಕೇಂದ್ರಗಳು) ಧಾರ್ಮಿಕ-ಸಾಮಾಜಿಕ ಪರಂಪರೆಯ ಭಾಗವಾಗಿದ್ದರೂ, ಇವು ಶಿಕ್ಷಣ ವ್ಯವಸ್ಥೆಯ ಮೇಲೆ ಆಳವಾದ ಪ್ರಭಾವ ಬೀರಿವೆ. ಇವುಗಳನ್ನು ಕೇವಲ ದಾನಕಾರ್ಯವೆಂದು ನೋಡುವುದಕ್ಕಿಂತ, ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಹಾಯ ಮಾಡುವ ಒಂದು ಸಾಮಾಜಿಕ ವ್ಯವಸ್ಥೆಯಾಗಿ ವಿಶ್ಲೇಷಿಸಬಹುದು.

1. ಉಚಿತ ಆಹಾರ ವ್ಯವಸ್ಥೆಗಳು ವಿದ್ಯಾರ್ಥಿಗಳ ಹಸಿವು ನಿವಾರಣೆ ಮಾಡುತ್ತವೆ: ಹಸಿದ ಹೊಟ್ಟೆಯಿಂದ ಕಲಿಕೆಯಲ್ಲಿ ಗಮನ ಕೇಂದ್ರೀಕರಿಸಲು ಸಾಧ್ಯವಿಲ್ಲ. ಆದ್ದರಿಂದ ಇಂತಹ ಪ್ರಸಾದ ನಿಲಯಗಳು ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸುಧಾರಿಸಿ, ಕಲಿಕೆಗೆ ಅನುಕೂಲಕರ ವಾತಾವರಣವನ್ನು ನಿರ್ಮಿಸುತ್ತವೆ.
2. ಶಾಲಾ ಹಾಜರಾತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ: ಬಡ ಕುಟುಂಬಗಳ ಮಕ್ಕಳು ಉಚಿತ ಆಹಾರ ಸಿಗುತ್ತದೆ ಎಂಬ ಕಾರಣದಿಂದ ಶಾಲೆಗೆ ನಿಯಮಿತವಾಗಿ ಬರುತ್ತಾರೆ. ಇದರ ಪರಿಣಾಮವಾಗಿ ಶಾಲೆ ಬಿಟ್ಟುಹೋಗುವಿಕೆ ಕಡಿಮೆಯಾಗುತ್ತದೆ ಮತ್ತು ಶಿಕ್ಷಣದ ವ್ಯಾಪ್ತಿ ಹೆಚ್ಚಾಗುತ್ತದೆ.
3. ಉಚಿತ ಪ್ರಸಾದ ನಿಲಯಗಳು ಸಮಾನತೆ ಮತ್ತು ಸಾಮಾಜಿಕ ಏಕತೆಯನ್ನು ಉತ್ತೇಜಿಸುತ್ತದೆ: ಎಲ್ಲ ವರ್ಗದ ಜನರು ಒಂದೇ ಸ್ಥಳದಲ್ಲಿ ಕುಳಿತು ಊಟ ಮಾಡುವುದರಿಂದ ಜಾತಿ, ಧರ್ಮ ಮತ್ತು ಆರ್ಥಿಕ ಭೇದಗಳು ಕಡಿಮೆಯಾಗುತ್ತವೆ. ಈ ಮೌಲ್ಯಗಳು ವಿದ್ಯಾರ್ಥಿಗಳಲ್ಲಿ ಮಾನವೀಯತೆ ಮತ್ತು ಸಹಾನುಭೂತಿ ಬೆಳೆಯಲು ಸಹಕಾರಿಯಾಗುತ್ತವೆ.
4. ಉಚಿತ ಪ್ರಸಾದ ನಿಲಯಗಳು ಮೌಲ್ಯಾಧಾರಿತ ಶಿಕ್ಷಣಕ್ಕೆ ಕಾರಣವಾಗುತ್ತವೆ: ಸೇವಾ ಮನೋಭಾವ, ಹಂಚಿಕೊಳ್ಳುವ ಗುಣ ಮತ್ತು ಕೃತಜ್ಞತೆ ಇಂತಹ ಜೀವನ ಮೌಲ್ಯಗಳನ್ನು ವಿದ್ಯಾರ್ಥಿಗಳು ಅನುಭವದ ಮೂಲಕ ಕಲಿಯುತ್ತಾರೆ. ಇದು ಅವರ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
5. ಉಚಿತ ಪ್ರಸಾದ ನಿಲಯಗಳು ಬಡ ವಿದ್ಯಾರ್ಥಿಗಳಿಗೆ ಸಮುದಾಯದ ಬೆಂಬಲ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತವೆ: ಕುಟುಂಬದ ಆರ್ಥಿಕ ಒತ್ತಡವನ್ನು ಕಡಿಮೆ ಮಾಡಿ, ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ನಿರಂತರವಾಗಿ ಮುಂದುವರಿಸಲು ನೆರವಾಗುತ್ತವೆ.

ವೀರಶೈವ-ಲಿಂಗಾಯತ ಮಠಗಳು ಕರ್ನಾಟಕದ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿವೆ. ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದ(ಊಟ) ಮತ್ತು ವಸತಿ ನಿಲಯಗಳ ಸೌಲಭ್ಯ ಒದಗಿಸುತ್ತಿವೆ. ಈ ಮಠಗಳು 'ಅನ್ನದಾಸೋಹ'ದ ಮೂಲಕ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಬೆಂಬಲ ನೀಡುತ್ತಿವೆ.

ಕರ್ನಾಟಕದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಪ್ರಸಾದ ನಿಲಯಗಳನ್ನು ನಡೆಸುತ್ತಿರುವ ವೀರಶೈವ ಧಾರ್ಮಿಕ ಸಂಸ್ಥೆಗಳಲ್ಲಿ ಚಿತ್ರದುರ್ಗದ ಬೃಹನ್ಮಠ, ಸುತ್ತೂರು ಮಠ, ಸಿದ್ದಗಂಗಾಮಠ, ಸಿರಿಗೆರೆಮಠ, ಕಲಬುರ್ಗಿಯ ಶರಣಬಸವೇಶ್ವರ ಮಠ, ಭಾಲ್ಕಿ ಮಠ, ಧಾರವಾಡದ ಮುರುಘಾಮಠ, ಗದುಗಿನ ತೋಂಟದಾರ್ಯಮಠ, ಹುಬ್ಬಳ್ಳಿಯ ಮೂರುಸಾವಿರ ಮಠ, ಬೆಳಗಾವಿಯ ನಾಗನೂರು ಮಠ, ಕೊಪ್ಪಳದ ಗವಿಮಠ, ಇಳಕಲ್ಲ ವಿಜಯ ಮಹಾಂತೇಶ್ವರ

ಮಠ, ಹಾಲಕೆರೆ ಅನ್ನದಾನೇಶ್ವರ ಮಠಗಳು ಪ್ರಮುಖವಾಗಿವೆ. "ಧಾರವಾಡದ ಮೃತ್ಯುಂಜಯ ಸ್ವಾಮಿಗಳು 1917 ರಲ್ಲಿ ಸ್ಥಾಪಿಸಿದ ಪ್ರಸಾದ ನಿಲಯದಿಂದ ಕನ್ನಡ ನಾಡಿನ ವೀರಶೈವ ಸಮಾಜದ ವಿದ್ಯಾರ್ಥಿಗಳಿಗೆ ಮಹದುಪಕಾರವಾಗಿದೆ" ಎಂದು ಡಾ. ಡಿ.ಸಿ. ಪಾವಟೆ ಅಭಿಪ್ರಾಯಪಟ್ಟಿದ್ದಾರೆ.[3]

ಹಾಲಕೆರೆ ಶ್ರೀ ಅನ್ನದಾನೇಶ್ವರ ಮಠವು ಉತ್ತರ ಕರ್ನಾಟಕ ಭಾಗದ ಗ್ರಾಮೀಣ ಪ್ರದೇಶದಲ್ಲಿ ಉಚಿತ ಪ್ರಸಾದ ನಿಲಯಗಳನ್ನು 19ನೇ ಶತಮಾನದ ಆರಂಭದಲ್ಲಿ ಪ್ರಾರಂಭಿಸಿದೆ. ಶ್ರೀಮಠದ ಪರಂಪರೆಯಲ್ಲಿ ಬರುವ ಶ್ರೀಗುರು ಅನ್ನದಾನ ಸ್ವಾಮಿಗಳು (1887–1977) ಪ್ರಾರಂಭಿಸಿದ ಉಚಿತ ಪ್ರಸಾದ ನಿಲಯಗಳಿಂದ ಆ ಕಾಲದ ಬಡ ಮಕ್ಕಳು ಶಿಕ್ಷಣ ಪಡೆಯಲು ಸಾಧ್ಯವಾಯಿತು. 1915 ರಲ್ಲಿ ಹಾಲಕೆರೆಯಲ್ಲಿ ಆರಂಭವಾದ ಸಂಸ್ಕೃತ ಪಾಠಶಾಲೆಯಲ್ಲಿ ಓದಲು ಬರುವ ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದ ನಿಲಯವನ್ನು ಮೊದಲು ಆರಂಭಿಸಿದರು. ಇವರ ಉಚಿತ ಪ್ರಸಾದ ನಿಲಯದ ಪರಿಕಲ್ಪನೆಯನ್ನು ತಿಳಿದುಕೊಳ್ಳಲು ಸ್ವತಃ ತುಮಕೂರಿನ ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮಿಗಳು ನರೇಗಲ್ಲಿಗೆ ಭೇಟಿ ನೀಡಿರುವುದು ಗಮನಿಸಬೇಕಾದ ಸಂಗತಿಯಾಗಿದೆ.[4]

ಬಸವ ಪ್ರಸಾದ ನಿಲಯ ಗದಗ–ಬೇಟಗೇರಿ: ಈ ಪ್ರಸಾದ ನಿಲಯವು 1935 ರಲ್ಲಿ ಸ್ಥಾಪಿಸಲ್ಪಟ್ಟಿತು. ಈ ಸಂಸ್ಥೆಯ ಮ್ಯಾನೇಜಿಂಗ್ ಕಮಿಟಿಯಲ್ಲಿ 11 ಜನ ಸದಸ್ಯರಿರುವರು. ಈ ಪ್ರಸಾದ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿ ದೊರೆಯುವುದು. ವಾರಕ್ಕೊಮ್ಮೆ ಸಾಹಿತ್ಯಿಕ, ಧಾರ್ಮಿಕ ಭಾಷಣ ಏರ್ಪಡಿಸುವುದು. ಬಡವಿದ್ಯಾರ್ಥಿಗಳಿಗೆ ವಾಚನಾಲಯವಿದೆ. ಶ್ರೀ ಮ.ನಿ.ಪ್ರ. ಅನ್ನದಾನ ಸ್ವಾಮಿಗಳು ಈ ನಿಲಯದ ಅಧ್ಯಕ್ಷರಾಗಿದ್ದಾರೆ. ಶ್ರೀ ಹತ್ತರಗಿ ಪ್ರಭುದೇವರು ಸಂಚಾಲಕರಾಗಿ, ಎ.ಎಸ್. ಮಾನ್ವಿಯವರು ಚೇರ್ಮನ್‌ರಾಗಿ ಸೇವೆ ನೀಡುತ್ತಿದ್ದಾರೆ.[5]

ಸ್ವಾತಂತ್ರ್ಯ ಸಿಗುವುದಕ್ಕಿಂತ ಪೂರ್ವದಲ್ಲಿ (1943) ನರೇಗಲ್‌ನಲ್ಲಿ ಪ್ರಾರಂಭಿಸಿದ ಶಿಕ್ಷಣ ಸಂಸ್ಥೆಯಲ್ಲಿ ಓದಲು ಬರುವ ಕಲ್ಯಾಣ ಕರ್ನಾಟಕ ಭಾಗದ ಬಡಮಕ್ಕಳಿಗೆ ಅನುಕೂಲವಾಗಲೆಂದು 1954 ರಲ್ಲಿ ಉಚಿತ ಪ್ರಸಾದ ನಿಲಯ ಆರಂಭಿಸಿದರು. ಆರಂಭದಲ್ಲಿಯೇ ಅಖಂಡ ರಾಯಚೂರು ಜಿಲ್ಲೆ, ಧಾರವಾಡ ಜಿಲ್ಲೆ, ವಿಜಯಪುರ ಜಿಲ್ಲೆಯ ಸುಮಾರು 500 ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದರು. ಪ್ರಸಾದಕ್ಕಾಗಿ ಸ್ವತಃ ಶ್ರೀಗಳು ಜೋಳದ ಭಿಕ್ಷೆಗೆ ಹಳ್ಳಿ–ಹಳ್ಳಿಗೆ ಹೋಗುತ್ತಿದ್ದರು. ಸಂಗ್ರಹವಾದ ಜೋಳವನ್ನು ಹಗೆವುಗಳಲ್ಲಿ ಶೇಖರಿಸಿಡಲಾಗುತ್ತಿತ್ತು. ಬರುಬರುತ್ತಾ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಯಿತು. ಸಾವಿರಾರು ವಿದ್ಯಾರ್ಥಿಗಳು ಪ್ರಸಾದವನ್ನು ಪಡೆಯುತ್ತಿದ್ದರು. ವಿದ್ಯಾರ್ಥಿಗಳ ವಸತಿಗಾಗಿ 52 ಕೋಣೆಗಳ ಕಟ್ಟಡವನ್ನು 1965 ರಲ್ಲಿ ನಿರ್ಮಿಸಿ ಅಂದಿನ ಮುಖ್ಯಮಂತ್ರಿಗಳಾದ ಎಸ್. ನಿಜಲಿಂಗಪ್ಪನವರಿಂದ ಉದ್ಘಾಟನೆ ಮಾಡಿಸಿದರು. ಇಂದು ಕೆ.ವಿ ಮತ್ತು ಬಿ.ಎಂ ಹೆಸರಿನ ಪ್ರಸಾದ ನಿಲಯವು 72 ವರ್ಷ ಪೂರೈಸಿ ಅಮೃತ ಮಹೋತ್ಸವದ ಹೊಸ್ತಿಲಲ್ಲಿದೆ.

**ಶ್ರೀಮಠದಿಂದ ಆರಂಭವಾಗಿದ್ದ ಉಚಿತ ಪ್ರಸಾದ ನಿಲಯಗಳು**

1. ಶ್ರೀ ಹಾಲಕೆರೆ ಅನ್ನದಾನೇಶ್ವರ ಕೃಪಾಪೋಷಿತ ಬುತ್ತಿ ಬಸವೇಶ್ವರ ಪ್ರಸಾದ ನಿಲಯ, ಕುಷ್ಟಗಿ
2. ಶ್ರೀ ಹಾಲಕೆರೆ ಅನ್ನದಾನೇಶ್ವರ ಪ್ರಸಾದ ನಿಲಯ, ಬೇಲೂರು
3. ಶ್ರೀ ಹಾಲಕೆರೆ ಅನ್ನದಾನೇಶ್ವರ ಪ್ರಸಾದ ನಿಲಯ, ಗುಡೂರು

4. ಶ್ರೀ ಹಾಲಕೆರೆ ಅನ್ನದಾನೇಶ್ವರ ಉಚಿತ ಪ್ರಸಾದ ನಿಲಯ, ಗಜೇಂದ್ರಗಡ
5. ಶ್ರೀ ಹಾಲಕೆರೆ ಅನ್ನದಾನೇಶ್ವರ ಬಸವ ಪ್ರಸಾದ ನಿಲಯ, ಗದಗ
6. ಶ್ರೀ ಹಾಲಕೆರೆ ಅನ್ನದಾನೇಶ್ವರ ಉಚಿತ ಪ್ರಸಾದ ನಿಲಯ, ಹನಮಸಾಗರ
7. ಶ್ರೀ ಹಾಲಕೆರೆ ಅನ್ನದಾನೇಶ್ವರ ಉಚಿತ ಪ್ರಸಾದ ನಿಲಯ, ಕಂದಗಲ್ಲ
8. ಶ್ರೀ ಹಾಲಕೆರೆ ಅನ್ನದಾನೇಶ್ವರ ಉಚಿತ ಪ್ರಸಾದ ನಿಲಯ, ಅಬ್ಬಿಗೇರಿ
9. ಶ್ರೀ ಹಾಲಕೆರೆ ಅನ್ನದಾನೇಶ್ವರ ಉಚಿತ ಪ್ರಸಾದ ನಿಲಯ, ನಿಡಗುಂದಿ
10. ಶ್ರೀ ಹಾಲಕೆರೆ ಅನ್ನದಾನೇಶ್ವರ ಉಚಿತ ಪ್ರಸಾದ ನಿಲಯ, ಹನಮನಾಳ
11. ಶ್ರೀ ಹಾಲಕೆರೆ ಅನ್ನದಾನೇಶ್ವರ ಉಚಿತ ಪ್ರಸಾದ ನಿಲಯ, ಮೂಡಿ
12. ಶ್ರೀ ಹಾಲಕೆರೆ ಅನ್ನದಾನೇಶ್ವರ ಉಚಿತ ಪ್ರಸಾದ ನಿಲಯ, ಇಟಗಿ
13. ಕೋಡಿಕೊಪ್ಪದ ವೀರಪ್ಪಜ್ಜನವರ ಹಾಗೂ ಬಾಗಲಕೋಟೆ ಮಲ್ಲಣಾರ್ಯರ ಉಚಿತ ಪ್ರಸಾದ ನಿಲಯ, ನರೇಗಲ್ಲ

ಶ್ರೀಮಠದಲ್ಲಿ ದಾಸೋಹ-ಗಣಾರಾಧನೆ-ಅನ್ನಸಂತರ್ಪಣೆಯ ಮೂಲಕ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಮಠದಲ್ಲಿ ಸ್ವೀಕರಿಸುವುದೆಲ್ಲವೂ ಸಾಮಾನ್ಯವಾಗಿ 'ಪ್ರಸಾದ' ಸ್ವರೂಪವನ್ನು ಪಡೆದಿರುತ್ತದೆ. ಈ ಪ್ರಸಾದ ವಿನಿಯೋಗವನ್ನು ಗ್ರಾಮಾಂತರ ಪ್ರದೇಶದಲ್ಲಿ ಹಾಲಕೆರೆ, ಗಂಜಿಹಾಲ, ಗದಗ, ನರೇಗಲ್ಲ, ಹನಮಸಾಗರ, ಕುಷ್ಟಗಿ ಮಠಗಳನ್ನೊಳಗೊಂಡ ಅಖಂಡ ಧಾರವಾಡ, ವಿಜಯಪುರ, ರಾಯಚೂರು ಜಿಲ್ಲೆಗಳಲ್ಲಿರುವ ಹಲವು ಮಠಗಳಲ್ಲಿ ಉಚಿತ ಪ್ರಸಾದ ನಿಲಯಗಳು ನಿರಂತರ ನಡೆದುಕೊಂಡು ಬರುತ್ತಿವೆ.[6] ಬದಲಾದ ಕಾಲಘಟ್ಟದಲ್ಲಿ ಕೆಲವು ಪ್ರಸಾದ ನಿಲಯಗಳ ಕಾರ್ಯ ಸ್ಥಗಿತಗೊಂಡಿದ್ದರೂ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈಗಿನ ಪೂಜ್ಯರಾದ ಮುಪ್ಪಿನ ಬಸವಲಿಂಗ ಸ್ವಾಮಿಗಳು ಮತ್ತೆ ಆರಂಭಿಸುವ ಯೋಚನೆಯಲ್ಲಿದ್ದಾರೆ.

ಉತ್ತರ ಕರ್ನಾಟಕದ ವೀರಶೈವ ವಿರಕ್ತಮಠಗಳು ಸಮಾಜಮುಖಿಯಾಗಿ ನಿಂತು ಅನ್ನ-ಜ್ಞಾನ-ಆಧ್ಯಾತ್ಮ (ತ್ರಿವಿಧ ದಾಸೋಹ) ನಡೆಸಿದ್ದು ಸತ್ಯ. ಹಳ್ಳಿಗಾಡು ಪ್ರದೇಶದ ಬಡಮಕ್ಕಳು ಶ್ರೀಮಠದ ಶಾಲೆ-ಕಾಲೇಜುಗಳಲ್ಲಿ ಪ್ರವೇಶ ಪಡೆಯುತ್ತಿದ್ದರು. ಜಾತಿ-ವರ್ಣ-ವರ್ಗವಿಲ್ಲದೆ ಸಮಾನತೆಯ ಗುಣಗಳಿಂದ ವಸತಿನಿಲಯವು ಸಾಮರಸ್ಯದಿಂದ ಕೂಡಿರುತ್ತಿತ್ತು. ನಾನು ಈ ಪ್ರಸಾದ ನಿಲಯದಲ್ಲಿ ಮೂರು ವರ್ಷ ಉಚಿತ ಪ್ರಸಾದ ಪಡೆದು ಓದಿದವನು. ಅನ್ನದಾನಿಯ ಹೆಸರು ಸಾರ್ಥಕಪಡಿಸಿಕೊಳ್ಳುವ ರೀತಿ, ಅನ್ನ-ಜ್ಞಾನಗಳೆರಡನ್ನು ಉಚಿತವಾಗಿ ನೀಡುತ್ತಿದ್ದರು. ನಾನು ಅದನ್ನು ಅನ್ನಬ್ರಹ್ಮನ ದೇಗುಲವೆಂದು ಕರೆಯುತ್ತಿದ್ದೆನು.6

ಶ್ರೀಮಠದ ಈ ಪ್ರಸಾದ ನಿಲಯಗಳಲ್ಲಿ ಓದಿ ನಾಡಿನ ಅಸಂಖ್ಯಾತ ಬಡ ಮಕ್ಕಳು ಬದುಕು ರೂಪಿಸಿಕೊಂಡಿದ್ದಾರೆ. ಡಾ. ಸಂಗಮೇಶ ಸವದತ್ತಿಮಠ, ಗಣೇಶ ಸುಗೂರ (ಐ. ಎಫ್.ಎಸ್), ಬಿ.ಡಿ. ಕರಡೋಣಿ ಹೀಗೆ ದೊಡ್ಡ ಪಟ್ಟಿಯನ್ನು ಉಲ್ಲೇಖಿಸಬಹುದು. ರಾಜ್ಯ ಮತ್ತು ದೇಶ-ವಿದೇಶಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಸರಕಾರವು ಅಕ್ಷರದಾಸೋಹವನ್ನು ಆರಂಭಿಸಿರುವುದನ್ನು ನಾವು ಕಾಣುತ್ತೇವೆ.

ಉಚಿತ ಪ್ರಸಾದ ನಿಲಯಗಳು ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ವಿದ್ಯಾರ್ಥಿಗಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಹಾಯ ಮಾಡುತ್ತಿವೆ.

ಕನ್ನಡ ನಾಡಿನ ವೀರಶೈವ ಮಠಗಳು ಶರಣರು ಪ್ರತಿಪಾದಿಸಿದ ದಾಸೋಹ ತತ್ವವನ್ನು, ಉಚಿತ ಪ್ರಸಾದ ನಿಲಯವನ್ನಾಗಿ ಪರಿವರ್ತಿಸಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ನೀಡುವ ಮಹತ್ವದ ಕಾರ್ಯ ಮಾಡಿವೆ, ಮಾಡುತ್ತಿವೆ. ಇಂತಹ ಮಠಗಳಲ್ಲಿ ಹಾಲಕೆರೆ ಶ್ರೀ ಅನ್ನದಾನೇಶ್ವರ ಮಠವು ಯಾವುದೇ ಪ್ರಚಾರವಿಲ್ಲದೆ ಸ್ವಾತಂತ್ರ್ಯ ಪೂರ್ವಕಾಲದಿಂದಲೂ ನಿರಂತರವಾಗಿ ಅನ್ನ-ಅಕ್ಷರ-ದಾಸೋಹವನ್ನು ನಡೆಸಿಕೊಂಡು ಬರುತ್ತಿದೆ.

**ಅಡಿ ಟಿಪ್ಪಣಿಗಳು:**

1. ದರ್ಗಾ, ರಂಜಾನ್, ವಚನ ಬೆಳಕು, ಮಂಗಳೂರು: ವಾರ್ತಾ ಭಾರತಿ ಪತ್ರಿಕೆ.
2. ಕಲಬುರ್ಗಿ, ಎಂ.ಎಂ., ಮಾರ್ಗ (ಸಂಪುಟ 4), ಪು. 177, 178.
3. ಸುವರ್ಣಝರಿ (ಲೇಖನ: ಇಂದಿನ ಶೈಕ್ಷಣಿಕ, ಸಾಹಿತ್ಯಿಕ ಕ್ಷೇತ್ರಗಳಲ್ಲಿ ವೀರಶೈವ ಮಠ-ಮಾನ್ಯಗಳ ಪಾತ್ರ), ಪು. 57.
4. ಕಿದಿಯೂರ, ಹ.ರಾ. (ಸಂಪಾದಕರು), (1975), ನಮ್ಮ ಗದಗ-ಬೆಟಗೇರಿ, ಪು. 60.
5. ಹೊರಕೇರಿ, ಮೃತ್ಯುಂಜಯ, ಹಾಲಕೆರೆ ಶ್ರೀಗುರು ಅನ್ನದಾನ ಸ್ವಾಮಿಗಳು ಸ್ಮರಣ ಗ್ರಂಥ (ಲೇಖನ: ದಾಸೋಹ ಮತ್ತು ಶ್ರೀಗಳು), ಪು. 184.
6. ಕಂಬಳಿ, ಈರಪ್ಪ, ಅನ್ನ-ಅಕ್ಷರ-ಅಮೃತ (ಲೇಖನ: ಅನ್ನಬ್ರಹ್ಮನ ಅಂಗಳದಲ್ಲಿ ), ಪು. 258.

**ಪರಾಮರ್ಶನ ಗ್ರಂಥಗಳು:**


1. ಹಿರೇವಡೆಯರ ಎಂ.ಎ. (ಸಂ.), (1994), ಸುವರ್ಣಝರಿ.
2. ನಾಗಭೂಷಣ ಶಾಸ್ತ್ರಿಗಳು ಮತ್ತು ಶಿರೂರ ಬಿ.ವಿ. (ಸಂ.), (1989), ಹಾಲಕೆರೆ ಶ್ರೀಗುರು ಅನ್ನದಾನ ಸ್ವಾಮಿಗಳು.
3. ಮೃತ್ಯುಂಜಯ ರುಮಾಲೆ (ಸಂ.), (2017), ಅನ್ನ-ಅಕ್ಷರ-ಅಮೃತ.
4. ಕಲಬುರ್ಗಿ ಎಂ.ಎಂ., (2010), ಮಾರ್ಗ ಸಂಪುಟ 4, ಬೆಂಗಳೂರು: ಸಪ್ನ ಬುಕ್ ಹೌಸ್.